ಪ್ರಾಥಮಿಕ ಚಿಕಿತ್ಸೆ ಸುರು ಮಾಡಿದರು. ನೋವು ಕೊಂಚ ಶಮನವಾಗುತ್ತಿದ್ದಂತೆ ಪಕ್ಕದಲ್ಲಿ ನಿಂತ ಜಯರಾಮಯ್ಯ, 'ನೀವೇನು ಹೆದ್ರಬೇಡಿ. ನನ್ನ ಮಗಳೆ ಇಲ್ಲಿ ಸೀನಿಯರ್ ಸರ್ಜನ್, ಅವಳೂ ನರ್ಸಿಂಗ್ ಹೋಮ್‌ನ ಪಾಲುದಾರರಲ್ಲೊಬ್ಬಳು. ವೆಚ್ಚದ ಬಗ್ಗೆ ಆಮೇಲೆ ನೋಡುವ' ಅಂದರು ಸಾಂತ್ವನದ ದನಿಯಲ್ಲಿ. ಹತ್ತು ನಿಮಿಷದಲ್ಲಿ ಬಂದ ಜಯರಾಮಯ್ಯನ ಮಗಳು ಡಾ. ವೇದವತಿ ಅವರನ್ನು ಪರೀಕ್ಷಿಸಿ, 'ಮೇಲ್ನೋಟಕ್ಕೆ ಅಂತಹ ಗಂಭೀರವಾದ್ದು ಇಲ್ಲ ಅನಿಸುತ್ತೆ. ಗ್ಯಾಸ್ ಸಮಸ್ಯೆಯಿಂದ್ಲೂ ಹೀಗಾಗುತ್ತೆ. ಆದ್ರೆ, ಎಲ್ಲಾ ಪರೀಕ್ಷೆ ಆದಮೇಲೇ ಸರಿಯಾಗಿ ಗೊತ್ತಾಗೋದು' ಅಂದವಳು ಅಡ್ಮಿಟ್ ಮಾಡಿಸಿದಳು. ಅರ್ಧಗಂಟೆಯಲ್ಲಿ ತಾಪಸಿ ಗಾಬರಿಯಲ್ಲಿ ಏದುಸಿರು ಬಿಡುತ್ತ ಬಂದವರು ಮಾತನಾಡುತ್ತಿದ್ದ ಗಂಡನನ್ನು ನೋಡಿ ಸ್ವಲ್ಪ ಸಮಾಧಾನ ಮಾಡಿಕೊಂಡು ಚೆನ್ನೈನಲ್ಲಿ ಸರ್ಜನ್ ಆಗಿರುವ ಮಗಳಿಗೆ ಫೋನ್ ಮಾಡತೊಡಗಿದರು. ಎಲ್ಲಾ ರಿಪೋರ್ಟ್ ಬರುವಾಗ ಮಧ್ಯಾಹ್ನವಾಗಿತ್ತು. ಎರಡು ಕ್ಲಾಟ್‌ಗಳಿವೆ, ಆದರೆ ಈಗಿಂದೀಗ ಅಂತಹ ಅಪಾಯವಿಲ್ಲ. ಆಂಜಿಯೋಪ್ಲಾಸ್ಟಿ ಮಾಡಿಕೊಂಡರೆ ಒಳ್ಳೆಯದು ಅನ್ನುವ ಅಭಿಪ್ರಾಯ ಬಂತು. ದೀನಪ್ರಸಾದರು ಮಂಚದ ಮೇಲೆ ಸಮಾಧಾನದಲ್ಲಿ ಕುಳಿತಿದ್ದರು. ಎದುರು ಜಯರಾಮ್, ಡಾ. ವೇದವತಿ ಮತ್ತು ತಾಪಸಿ ಕುಳಿತು ಮಾತನಾಡುತ್ತಿದ್ದರು. ಆಗಷ್ಟೆ ಬಾಗಿಲು ತೆರೆದುಕೊಂಡು 'ವೇದಾ ಒಂದ್ನಿಮಿಷ' ಅನ್ನುತ್ತ ಒಳಬಂದವಳನ್ನು ನೋಡಿದ ಜಯರಾಮಯ್ಯ, 'ಇವಳೆ ನನ್ನ ತಂಗಿ ಮಗಳು ಶ್ಯಾಮಲಿ ಅಂತ. ಪ್ರೊಫೆಸರಾಗಿದಾಳೆ ಅಂದಿದ್ನಲ್ಲ' ಅಂತ ಪರಿಚಯಿಸಿದರು. 'ಎಷ್ಟು ದಿವಸಾಯ್ತು ನಿನ್ನ ನೋಡಿ' ಅಂದ ತಾಪಸಿ ಧಾವಿಸಿ ಹೋಗಿ ಅವಳನ್ನು ಬಳಸಿದರು. ಇವಳು ತನ್ನ ಹೆಂಡತಿಗೆ ಪರಿಚಯವಾ ಅಂತ ದೀನಪ್ರಸಾದ್ ಅಚ್ಚರಿಪಡುತ್ತಿದ್ದಾಗ, ತಾಪಸಿಯ ಹೆಗಲಮೇಲೆ ತೋಳು ಹಾಕಲು ಅತ್ತ ತಿರುಗಿದ ಶ್ಯಾಮಲಿಯ ಎಡಗೆನ್ನೆಯಮೇಲೆ ಉದ್ದಿನಕಾಳಿನ ಗಾತ್ರದ ಕಪ್ಪು ಮಚ್ಚೆ ಸ್ಪಷ್ಟವಾಗಿ ಗೋಚರಿಸಿತು.



**ಬನವಾಸಿ ವೆಂಕಟೇಶ ದೀಕ್ಷಿತ್**

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್ ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬಳಿಕ, ದೂರಸಂಪರ್ಕ ಇಲಾಖೆಯಲ್ಲಿ ಉಪ ಮಹಾಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಕಟಿತ ಕಥಾಸಂಕಲನಗಳು: 'ಕಾವಡಿ', ಬೇರಿಗಂಟಿದ ಮಣ್ಣು', 'ಗಡಿಯೀಚೆಯ ಸದ್ದುಗಳು'. ಕಾದಂಬರಿ: 'ನಕ್ಷತ್ರ ನುಂಗುವ ಸದ್ದು'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.